# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ ವಾರ್ಡ್ ಸಮಿತಿ/ ಸಹಾಯಕ ಅಭಿಯಂತರರು ರವರ ಕಛೇರಿ, ಕೋರಮಂಗಲ ವಾರ್ಡ್ 151,**
**ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು**

ದಿನಾಂಕ:19.05.2022

## –: ಸಭೆ ತಿಳುವಳಿಕೆ ಪತ್ರ :–

ವಿಷಯ :– ದಿನಾಂಕ:21.05.2022 ರಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

ಉಲ್ಲೇಖ:– ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶದ ಪತ್ರ ಸಂಖ್ಯೆ: ಬಿ12(5)/ಪಿಆರ್/35/2020–21, ದಿನಾಂಕ:21–09–2020.

* * * * *

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್–151 ರ ನೋಡಲ್ ಅಧಿಕಾರಿಯವರಾದ ಶ್ರೀ ವನರಾಜ .ಪಿ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:21.05.2022 ರಂದು ಮಧ್ಯಾಹ್ನ 3.00 ಕ್ಕೆ ಸ್ಥಳ: **ಕೋರಮಂಗಲ ವಾರ್ಡ್ 151ರ ಕಛೇರಿ, ಕಾಮಗಾರಿ ಇಲಾಖೆ, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೋರಮಂಗಲ, ಬೆಂಗಳೂರು** ರಲ್ಲಿ ವಾರ್ಡಿಗೆ ಸಂಬಂಧಪಟ್ಟ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಕಮಿಟಿ ಸಭೆಯನ್ನು ನಡೆಸಲು ನಿರ್ಧರಿಸಲಾಗಿದ್ದು, ಸದರಿ ದಿನಾಂಕದಂದು ತಾವುಗಳು ತಪ್ಪದೇ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

**ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು:** 1) ವಾರ್ಡಿನ ಘನತ್ಯಾಜ್ಯದ ಬಗ್ಗೆ 2) ವಾರ್ಡಿನಲ್ಲಿ ಕೋವಿಡ್–19ರ ಬಗ್ಗೆ 3) ಸಾರ್ವಜನಿಕರ ಮೂಲಭೂತ ಸೌಕರ್ಯಗಳ ಬಗ್ಗೆ 4) BWSSB, BESCOM & POLICE ಇಲಾಖೆಗಳ ಹಾಗೂ ತೆರಿಗೆ ವಸೂಲಾತಿಗಳ ಬಗ್ಗೆ ಈ ವಿಷಯಗಳಿಗೆ ಸಂಬಂಧಿಸದ ಮಾಹಿತಿಗಳೊಂದಿಗೆ ತಪ್ಪದೇ ಈ ಸಮಿತಿ ಸಭೆಗೆ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ 151, ಕೋರಮಂಗಲ

11.40 A.M.

**ಪ್ರತಿಯನ್ನು:–**

1. ಶ್ರೀ ಶಶಿಧರ್ .ಸಿ, ನೋಡಲ್ ಅಧಿಕಾರಿಗಳು ಹಾಗೂ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು (ಬಿ.ಟಿ.ಎಂ. ಲೇಔಟ್ ವಿಭಾಗ) ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪವಿಭಾಗ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ.ಲೇಔಟ್ ವಿಭಾಗ, ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
6. ಆರೋಗ್ಯ ವೈದ್ಯಾಧಿಕಾರಿಗಳು, ಬಿ.ಟಿ.ಎಂ. ಲೇಔಟ್ ವಿಭಾಗ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ನಿರ್ದೇಶಕರು, ತೋಟಗಾರಿಕೆ, ಬಿ.ಬಿ.ಎಂ.ಪಿ. (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.

Scanned by CamScanner

Ward Committee Meeting Ward-151 - Koramangala.

Date: 21/05/2022
Day: Saturday

| Sl.No. | Name | Signature |
|---|---|---|
| 1 | Sri P. Varaaj [Nodal officer] | [signature] 21/05/2022 |
| 2 | Sri. M. Chandrappa | [signature] |
| 3 | Smt. Padmashree Balaram | |
| 4 | Sri. M.A. Abbas | [signature] |
| 5. | Sri. K.N. Chandrashekar | |
| 6 | Sri. Vishwanath Kashyap | |
| 7 | Sri. G.M. Shetty | |
| 8 | Sri. Dr.K. Umeshwara | [signature] |
| 9 | Sri. Jayaramu | |
| 10 | Smt. Neeraja Shetty | |
| 11 | Sri. M. Srinivas | [signature] |
| 12 | Sri. M. Sampangi Raju. | [signature] |
| 13 | Sri P. Chandrashekar [Secretary ward 151] | |
| 14. | Pyarejaan | |



Date: 21/05/2022
Day: Saturday.

| Sl. No. | Name | Department | Signature |
|---|---|---|---|
| 1 | Gajanan Akkimaradi | BWSSB | [signature] |
| 2. | Dr. Sandeep R.K | Health | [signature] |

Scanned by CamScanner





Scanned by CamScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಕೋರಮಂಗಲ ಉಪ-ವಿಭಾಗದ ವಾರ್ಡ್ ಸಂಖ್ಯೆ-151 (ಕೋರಮಂಗಲ) ವಾರ್ಡ್ 151ರ ಕಛೇರಿ, ಕಾಮಗಾರಿ ಇಲಾಖೆ, 2ನೇ ಅಡ್ಡರಸ್ತೆ, 5ನೇ ಬ್ಲಾಕ್, ಕೋರಮಂಗಲದಲ್ಲಿ ದಿನಾಂಕ:21.05.2022 ರಂದು ಮೇ-2022 ರ ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ ಪಿ. ವನರಾಜ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151ರ ರವರ ಅಧ್ಯಕ್ಷತೆಯಲ್ಲಿ ಕೋರಮಂಗಲ ವಾರ್ಡ್ 151ರ ಕಛೇರಿ, ಕಾಮಗಾರಿ ಇಲಾಖೆ, 2ನೇ ಅಡ್ಡರಸ್ತೆ, 5ನೇ ಬ್ಲಾಕ್ ಕೋರಮಂಗಲ, ಬೆಂಗಳೂರು ಇಲ್ಲಿ ದಿನಾಂಕ:21.05.2022 ರಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರೊಂದಿಗೆ ನಡೆದ ಸಭೆಯ ನಡವಳಿಗಳು:-

**ಹಾಜರಿದ್ದ ಸದಸ್ಯರುಗಳು:**

1. ಶ್ರೀ ಎಂ.. ಚಂದ್ರಪ್ಪ ,
2. ಶ್ರೀ ಎಂ.ಎ. ಅಬ್ಬಾಸ್
3. ಡಾ॥ ಕೆ. ಉಮೇಶ್ವರ
4. ಶ್ರೀ ಎಂ. ಶ್ರೀನಿವಾಸ್
5. ಶ್ರೀ ಎಂ. ಸಂಪಂಗಿ ರಾಜು

**ಹಾಜರಿದ್ದ ಅಧಿಕಾರಿಗಳ ವಿವರಗಳು**

1. ಶ್ರೀ ಪಿ. ವನರಾಜ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
2. ಶ್ರೀ ಚಂದ್ರಶೇಖರ್ .ಪಿ., ಕಾರ್ಯದರ್ಶಿ, ವಾರ್ಡ್ ಸಮಿತಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್-151 ಕೋರಮಂಗಲ
3. ಶ್ರೀ ಗಜಾನನ ಅಕ್ಕಿಮರಡಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ
4. ಶ್ರೀ ಸಂದೀಪ್ ಆರ್.ಕೆ., ಆರೋಗ್ಯ ಇಲಾಖೆ

* * * * * *

ಶ್ರೀ ಪಿ. ವನರಾಜ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 151 ರವರು ಮೊದಲಿಗೆ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳನ್ನು ಮತ್ತು ಇಲಾಖಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಡಾ॥ ಕೆ. ಉಮೇಶ್ವರ ರವರು ಮಾತನಾಡಿ, 17ನೇ 'ಇ' ಮುಖ್ಯರಸ್ತೆಯಲ್ಲಿರುವ ಮರದ ಕೊಂಬೆಗಳು ಒಣಗಿದ್ದು, ಬೀಳುವ ಹಂತದಲ್ಲಿರುತ್ತವೆ. ಆದುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಮುಂದಾಗುವ ಅಪಾಯವನ್ನು ತಪ್ಪಿಸಲು ಒಣಗಿರುವ ಮರದ ಕೊಂಬೆಗಳನ್ನು ಕತ್ತರಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಡಾ॥ ಕೆ. ಉಮೇಶ್ವರ ರವರು ಮಾತನಾಡಿ, 17ನೇ 'ಜಿ' ಮುಖ್ಯರಸ್ತೆಯಲ್ಲಿ Road Marking ಮಾಡಬೇಕೆಂದು ಸಭೆಯಲ್ಲಿ ಕೋರಿದರು.

ಡಾ॥ ಕೆ. ಉಮೇಶ್ವರ ರವರು ಮಾತನಾಡಿ, ಡೆಂಗ್ಯೂ ಜ್ವರ ಹರಡುವ ರೀತಿ ಹಾಗೂ ಅದನ್ನು ತಡೆಗಟ್ಟುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಭೆಯಲ್ಲಿ ವಿವರಿಸಿದರು ಹಾಗೂ ಸಾರ್ವಜನಿಕರಲ್ಲಿ ಇದರ ಬಗ್ಗೆ ಅರಿವು ಮೂಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು ಹಾಗೂ ರೋಗದ ಲಕ್ಷಣಗಳು ಕಂಡು ಬಂದಲ್ಲಿ ಗಣೇಶ



Scanned by CamScanner

ದೇವಸ್ಥಾನದ ಹತ್ತಿರವಿರುವ ಆರೋಗ್ಯ ಕೇಂದ್ರದಲ್ಲಿ ಉಚಿತ ರಕ್ತ ಪರೀಕ್ಷೆ ಮಾಡಲಾಗುತ್ತಿದ್ದು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳುವ ಜಾಗೃತಿ ಮೂಡಿಸಬೇಕೆಂದು ಸಭೆಗೆ ತಿಳಿಸಿದರು.

ಶ್ರೀ ಎಂ.ಎ. ಅಬ್ಬಾಸ್ ರವರು ಮಾತನಾಡಿ, ವಾಟರ್ ಟ್ಯಾಂಕ್ ಸಿಗ್ನಲ್‌ನಿಂದ ಸುಖ ಸಾಗರ್ ಹೋಟೆಲ್‌ವರೆಗೂ ಇರುವ ರಸ್ತೆ ಚರಂಡಿಯಲ್ಲಿ ಹೂಳುಗಳನ್ನು ತೆರವುಗೊಳಿಸಬೇಕೆಂದು ಹಾಗೂ ಹದಗೆಟ್ಟಿರುವ ಚಪ್ಪಡಿಗಳನ್ನು ಬದಲಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀಮತಿ ಪಾರ್ವತಿ ಶ್ರೀರಾಮ್ ರವರು ಮಾತನಾಡಿ, ಸ್ವಾಭಿಮಾನಿ ಉದ್ಯಾನವನದ ಹತ್ತಿರವಿರುವ ರಸ್ತೆ ಚರಂಡಿಗಳಲ್ಲಿ ಇರುವ ಹೂಳುಗಳನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ಕೋರಿದರು.

ಶ್ರೀ ಎಂ. ಚಂದ್ರಪ್ಪ ರವರು ಮಾತನಾಡಿ, ಕೋರಮಂಗಲ ವ್ಯಾಪ್ತಿಯಲ್ಲಿ ಎಲ್ಲಾ ರಸ್ತೆ ಚರಂಡಿಗಳಲ್ಲಿ ಇರುವ ಹೂಳುಗಳನ್ನು ತೆರವುಗೊಳಿಸುವುದು ಹಾಗೂ ರಸ್ತೆ ಚರಂಡಿ ಮೇಲಿರುವ ಚಪ್ಪಡಿ (Slabs) ಗಳು ಕೆಲವೊಂದು ಹಾಳಾಗಿರುತ್ತವೆ. ಅವುಗಳನ್ನು ಬದಲಿಸಿ ಹೊಸದಾಗಿ ಚಪ್ಪಡಿ(Slabs) ಗಳನ್ನು ಅಳವಡಿಸಬೇಕೆಂದು ಹಾಗೂ ಓ.ಎಫ್.ಸಿ. ಕೇಬಲ್‌ಗಳು ರಸ್ತೆಗಳಲ್ಲಿ ಜೋತಾಡುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಜೋತಾಡುತ್ತಿರುವ ಓ.ಎಫ್.ಸಿ. ಕೇಬಲ್‌ಗಳನ್ನು ತೆರವುಗೊಳಿಸಬೇಕೆಂದು ಸಭೆಗೆ ತಿಳಿಸಿದರು.

ಶ್ರೀ ಎಂ. ಚಂದ್ರಪ್ಪ ರವರು ಮಾತನಾಡಿ, ರಸ್ತೆಯಲ್ಲಿರುವ ಮ್ಯಾನ್‌ಹೋಲ್‌ಗಳು ರಸ್ತೆಯ ಮಟ್ಟಕ್ಕಿಂತ ತಳಮಟ್ಟದಲ್ಲಿದ್ದು, ಇದರಿಂದ ರಸ್ತೆಯಲ್ಲಿ ಸುಗಮವಾಗಿ ವಾಹನ ಸಂಚರಿಸಲು ತೊಂದರೆಯಾಗುತ್ತಿರುತ್ತದೆ. ಆದುದರಿಂದ ಇದನ್ನು ಸರಿಪಡಿಸುವಂತೆ ಸಭೆಯಲ್ಲಿ ಕೋರಿದರು.

ಶ್ರೀ ಎಂ. ಚಂದ್ರಪ್ಪ ರವರು ಮಾತನಾಡಿ, ಕೋರಮಂಗಲ ವ್ಯಾಪ್ತಿಯಲ್ಲಿರುವ ಎಲ್ಲಾ ಉದ್ಯಾನವನಗಳಲ್ಲಿ ಅಳವಡಿಸಿರುವ ಕಾಬಲ್ ಸ್ಟೋನ್‌ಗಳ ಮಟ್ಟ ಸಮವಾಗಿರುವುದಿಲ್ಲ. ಇದರಿಂದಾಗಿ ಸುಗಮವಾಗಿ ಸಂಚರಿಸಲು ತೊಂದರೆಯಾಗುತ್ತಿರುತ್ತದೆ. ಆದುದರಿಂದ ಇದನ್ನು ಸರಿಪಡಿಸಬೇಕೆಂದು ಸಭೆಗೆ ತಿಳಿಸಿದರು.

ಡಾ॥ ಕೆ. ಉಮೇಶ್ವರ ರವರು ಮಾತನಾಡಿ, ಉದ್ಯಾನವನಗಳಲ್ಲಿ ಅಳವಡಿಸಿರುವ ವ್ಯಾಯಾಮದ ಸಲಕರಣೆಗಳ ನಿರ್ವಹಣೆ ಕೊರತೆಯಿಂದಾಗಿ, ಅವುಗಳು ಹಾಳಾಗುತ್ತಿರುತ್ತವೆ. ಆದುದರಿಂದ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಶ್ರೀಮತಿ ನೀರಜಾಶೆಟ್ಟಿ ಮತು ಶ್ರೀ ವಿಶ್ವನಾಥ್ ಕಶ್ಯಪ್ ರವರು ಮಾತನಾಡಿ, ಇತ್ತಿಚೆಗೆ ಸುರಿದ ಭಾರಿ ಮಳೆಯಿಂದಾಗಿ ವಾರ್ಡ್‌ನ ಕೆಲವು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿದ್ದು, ಸ್ಥಳೀಯ ನಿವಾಸಿಗಳಿಗೆ ತೊಂದರೆಯುಂಟಾಗಿರುತ್ತದೆ. ಆದುದರಿಂದ ಮುಂಬರುವ ಮಳೆಗಾಲದ ದೃಷ್ಟಿಯಿಂದ ಮುಂಜಾಗ್ರತಾ ಕ್ರಮಗಳನ್ನು ವಹಿಸುವಂತೆ ಸಭೆಯಲ್ಲಿ ಕೋರಿದರು.

ಶ್ರೀ ಸಂಪಂಗಿ ರಾಜು ರವರು ಮಾತನಾಡಿ, ಹೊಸೂರು ಮುಖ್ಯರಸ್ತೆಯಲ್ಲಿ ಪಾದಚಾರಿ ಮಾರ್ಗದಲ್ಲಿ ಕೆಲವೊಂದು Slabs ಗಳು ಹಾಳಾಗಿರುತ್ತವೆ. ಆದುದರಿಂದ ಆ ಸ್ಥಳದಲ್ಲಿ ಹೊಸ Slabs ಗಳನ್ನು ಅಳವಡಿಸಬೇಕೆಂದು ಸಭೆಗೆ ತಿಳಿಸಿದರು.

ಶ್ರೀ ಸಂಪಂಗಿ ರಾಜು ರವರು ಮಾತನಾಡಿ, ಸಿದ್ಧಾರ್ಥ ಕಾಲೋನಿಯಲ್ಲಿರುವ ಸರ್ಕಾರಿ ಶಾಲೆಯ ಹತ್ತಿರವಿರುವ ರಸ್ತೆ ಚರಂಡಿಗಳಲ್ಲಿ ತುಂಬಿರುವ ಹೂಳುಗಳನ್ನು ತೆರವುಗೊಳಿಸಬೇಕೆಂದು ಸಭೆಗೆ ತಿಳಿಸಿದರು.

ವಾರ್ಡ್ ಸಭೆಯ ಎಲ್ಲಾ ಸದಸ್ಯರು ಮಾತನಾಡಿ, ಇಂದಿನ ಸಭೆಗೆ ಗೈರು ಹಾಜರಾಗಿರುವ ವಿವಿಧ ಇಲಾಖೆಯ ಅಧಿಕಾರಿಗಳು ಮುಂದಿನ ವಾರ್ಡ್ ಸಭೆಗೆ ಹಾಜರಾಗುವಂತೆ ಸೂಚಿಸಿ, ಪತ್ರವನ್ನು ಬರೆಯುವಂತೆ ಕಾರ್ಯದರ್ಶಿ, ವಾರ್ಡ್ ಸಮಿತಿ ರವರಿಗೆ ತಿಳಿಸಿದರು.



Scanned by CamScanner

ಶ್ರೀ ಪಾರ್ವತಿ ಶ್ರೀರಾಮ್ ರವರು ಮಾತನಾಡಿ, ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳುವಂತೆ ಸಭೆಗೆ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಅನುಷ್ಠಾನಕ್ಕೆ ತಂದು ಮತ್ತು ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಚಂದ್ರಶೇಖರ್ .ಪಿ)
ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್–151 ಕೋರಮಂಗಲ

21/05/2022
(ಶ್ರೀ ಪಿ. ವನರಾಜ)
ನೋಡಲ್ ಅಧಿಕಾರಿಗಳು ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು

**ಪ್ರತಿಯನ್ನು:**

1. ಕೇಂದ್ರ ಕಛೇರಿಯ bbmp198wardcommitte@gmail.com ಇ–ಮೇಲ್ ಮುಖಾಂತರ ಸಲ್ಲಿಸುತ್ತಾ ಬೃ.ಬೆಂ.ಮ.ಪಾಯ ಅಂತರ್ಜಾಲದಲ್ಲಿ ಪ್ರಕಟಿಸಲು ಈ ಮೂಲಕ ಕೋರಲಾಗಿದೆ.
2. ಕಛೇರಿ ಕಡತಕ್ಕೆ.



Scanned by CamScanner